ದಿನಾಂಕ 19-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀಸವಾಲು: ಶ್ರೀ. ಎನ್.ಸಿ.ಎಸ್. ಪ್ರತಿವಾದಿ ಪರ ವಕೀಲರಿಂದ:</u>-**

ಆಂಜಮ್ಮ ನನ್ನ ತಂಗಿ ಎಂದರೆ ಸರಿ. ಆಕೆ ಸತ್ತುಹೋಗಿರುತ್ತಾಳೆ ಎಂದರೆ ಸರಿ. ಅವಳ ಮಕ್ಕಳನ್ನು ಪಾರ್ಟಿಯನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರನ್ನು ಪಾರ್ಟಿಯನ್ನಾಗಿ

ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಂಪಂಗಿರಾಮಯ್ಯ ನನಗೆ ತಮ್ಮನಾಗಬೇಕು. ಸಂಪಂಗಿರಾಮಯ್ಯನವರು 2008 ನೇ ಇಸವಿಯಲ್ಲಿ ನಮ್ಮ ವಿರುದ್ಧ ಅಸಲು ದಾವಾ ಸಂಖ್ಯೆ 241/2008 ನ್ನು ಹಾಕಿದ್ದರು ಎಂದರೆ ಸರಿಯಲ್ಲ. ಆ ಪ್ರಕರಣದಲ್ಲಿ ನಾನು 5 ನೇ ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಾನು ನಮ್ಮ ವಕೀಲರಿಗೆ ಪ್ರಕರಣವನ್ನು ಕೊಟ್ಟು ಸ್ವಲ್ಪ ದಿನಗಳ ಕಾಲ ದಾವೆಯನ್ನು ನಡೆಸಿರುತ್ತೇನೆಂದರೆ ಸರಿಯಲ್ಲ.

ಆ ದಾವೆಯ ಬಗ್ಗೆ ಈ ದಾವೆಯಲ್ಲಿ ಹೇಳಿರುವ ಬಗ್ಗೆ ನನಗೆ ನೆನಪಿಲ್ಲ. ಆ ದಾವೆಯಲ್ಲಿ ಏನಾಗಿದೆ ಎಂಬುವುದರ ಬಗ್ಗೆ ನಾನು ತಿಳಿದುಕೊಂಡಿಲ್ಲ. ಆ ದಾವೆ 03.01.2013 ರಂದು ಕಿತ್ತು ಹೋಗಿರುತ್ತದೆ ಎಂದರೆ ಸಂಪಂಗಿ ರಾಮಯ್ಯರವರು ಪ್ರಕರಣ ದಾಖಲಿಸಿದ್ದರ ಬಗ್ಗೆ ನನಗೆ ಗೊತ್ತಿದೆ, ಆ ದಾವೆ ಏನಾಗಿದೆ ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ಆ ದಾವೆ ದಿನಾಂಕಃ03.01.2013 ರಂದು ಕಿತ್ತಿ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಈ ದಾವೆಯನ್ನು ಕಸ್ತೂರಿಯ ಮೇಲೆ ಭಾಗ ಬೇಕು ಎಂದು ಹಾಕಿರುತ್ತೇನೆ. ಈ ದಾವೆಯನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. 10 ನೇ ಪ್ರತಿವಾದಿಯ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ನಾನು ಎಲ್ಲಾ ದಾಖಲೆಗಳನ್ನು ನೋಡಿ ಸಲ್ಲಿಸಿರುತ್ತೇನೆಂದರೆ ಸರಿ.

ಸರ್ವೇ ನಂಬರ್ 87 ಮತ್ತು 88 ಕಟಮಾಚನಹಳ್ಳಿ ಹತ್ತಿರ ಇದೆ. ನಾನು ದಾವೆಯನ್ನು ಸಲ್ಲಿಸುವಾಗ ಸರ್ವೇ ನಂಬರ್ 88 ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ಯಾರು ಖರೀದಿಸಿರುತ್ತಾರೋ ಅವರ ವಿರುದ್ಧ ದಾವೆಯನ್ನು ಹಾಕಿರುತ್ತೇನೆಂದು ನುಡಿಯುತ್ತಾರೆ. 10 ನೇ ಪ್ರತಿವಾದಿಗೆ ಸರ್ವೇ ನಂಬರ್ 88 ಹೇಗೆ ಹೋಯಿತು ಎಂಬುವುದರ ಬಗ್ಗೆ ನಾನು ಎಂ.ಆರ್., ಪಹಣಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ.

10 ನೇ ಪ್ರತಿವಾದಿ ಸರ್ವೇ ನಂಬರ್ 88 ನ್ನು ಖರೀದಿ ಮಾಡಿರುವುದರ ಬಗ್ಗೆ ನನಗೆ ಗೊತ್ತಿದೆ. ಸಾಕ್ಷಿ ಮುಂದುವರೆದು ಮೊದಲು ಗೊತ್ತಿರಲಿಲ್ಲ, ನಂತರ ಗೊತ್ತಾಯಿತು ಎನ್ನುತ್ತಾರೆ. ನನ್ನ ಅಣ್ಣ ನನ್ನ ವಿರುದ್ಧ ದಾವೆ ಹೂಡಿದಾಗ ನನಗೆ ಸರ್ವೇ ನಂಬರ್ 88 ನ್ನು ಕಸ್ತೂರಿರವರು ಖರೀದಿಸಿದ ವಿಷಯ ಗೊತ್ತಿತ್ತು ಎಂದರೆ ಸಾಕ್ಷಿಯು ನಾನು ಕಾಗದಗಳನ್ನು ಹಾಜರ್ ಪಡಿಸಿರುತ್ತೇನೆಂದು ನುಡಿಯುತ್ತಾರೆ.

10 ನೇ ಪ್ರತಿವಾದಿ ದಾವೆಯನ್ನು ಖರೀದಿ ಮಾಡಿದ ನಂತರ ನನಗೆ ಗೊತ್ತಾಯಿತು. ಸರ್ವೇ ನಂಬರ್ 87 ಮತ್ತು 88 ದೊಡ್ಡಪ್ಪಯ್ಯ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ಆ ಎರಡು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಾತ ಮತ್ತು ನನ್ನ ತಂದೆ ದೊಡ್ಡರಾಮಯ್ಯ, ಹನುಮಂತಪ್ಪ, ಚಿಕ್ಕರಾಮಯ್ಯ ಮತ್ತು ಯರ್ರಪ್ಪ ರವರು ಸೇರಿಕೊಂಡು ಸರ್ವೇ ನಂಬರ್ 88 ಮತ್ತು 87 ನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ಹಾಕಿರುವ ತಕರಾರುಗಳ ಬಗ್ಗೆ ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಮತ್ತು 9 ನೇ ಪ್ರತಿವಾದಿ ಸೇರಿಕೊಂಡು ದಿನಾಂಕಃ 23.06.1984 ರಂದು ನನ್ನ ತಾತ, ನನ್ನ ತಂದೆ ದೊಡ್ಡರಾಮಯ್ಯ, ಹನುಮಂತಪ್ಪ, ಚಿಕ್ಕರಾಮಯ್ಯ ಹಾಗೂ ಯರ್ರಪ್ಪ ರವರ ಹತ್ತಿರ ಸರ್ವೇ ನಂಬರ್ 88 ಮತ್ತು 87 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರು ಖರೀದಿ ಮಾಡಿದ್ದಕ್ಕೆ ನಾನು ಅವರ ವಿರುದ್ಧ ದಾವೆಯನ್ನು ಹೂಡಿರುತ್ತೇನೆಂದು ನುಡಿಯುತ್ತಾರೆ. ಅವರು ಏತಕ್ಕಾಗಿ ಆಸ್ತಿಯನ್ನು ಮಾರಾಟ ಮಾಡಿದ್ದರು ಎಂಬುವುದರ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಮಾರಾಟ ಮಾಡಿರುತ್ತಾರೆ, ನಾನು ಮಾರಾಟ ಮಾಡಿಲ್ಲ ಎನ್ನುತ್ತಾರೆ.

ಬೇರೆ ಜಮೀನನ್ನು ಖರೀದಿ ಮಾಡಲು ಮತ್ತು ಬೋರೆವೆಲ್ ನ್ನು ಹಾಕಿಸಲು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಬೇರೆ ಆಸ್ತಿಗಳನ್ನು ಖರೀದಿ ಮಾಡಿಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬಸ್ಥರು ಬೇರೆ ಜಮೀನನ್ನು ಖರೀದಿ ಮಾಡಿದ್ದು ಮತ್ತು ಬೋರೆವೆಲ್ ಹಾಕಿಸಿದ್ದರ ಬಗ್ಗೆ ನನಗೆ ಗೊತ್ತಿಲ್ಲ. 1984 ನೇ ಇಸವಿಯಲ್ಲಿ ಹಾಕಿರುವ ಬೊರೆವೆಲ್ ಈಗಲೂ ಇದೆ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆವಾಗ ಬೋರ್ ಹಾಕಿರಬಹುದು, ಈಗ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**(ರೂಪಾ.ಸಿ. ವಗ್ಗಾ)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.